# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**
ನೊಂದಣಿ ಸಂಖ್ಯೆ :

## ಪಿಎಸ್ಐ ಪತ್ರಿಕೆ – 1

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

**ಪ್ರಶ್ನೆಗಳು**

**ಅಂಕಗಳು : 100**

ಹೆಸರು :

ಮೊಬೈಲ್ ನಂ :

**07-03-2021**

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿದಂತೆ 600 ಪದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ.**

1. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಸವಾಲುಗಳು ಹಾಗೂ ಪರಿಣಾಮಕಾರಿ ಅನುಷ್ಠಾನದ ಕುರಿತು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿರಿ.

ಅಥವಾ

2. ಒಂದು ರಾಷ್ಟ್ರ, ಒಂದು ಚುನಾವಣೆಯ ಅಗತ್ಯತೆ ಹಾಗೂ ಸವಾಲುಗಳ ಕುರಿತು ವಿಶ್ಲೇಷಿಸಿರಿ.

ಅಥವಾ

3. ಕೃಷಿ ಮಸೂದೆಯ ವಿವಾದದ ಕುರಿತು ವಿಶ್ಲೇಷಿಸಿರಿ.

ಅಥವಾ

4. ಸೈಬರ್ ಕ್ರೈಮ್

ಅಥವಾ

5. ನ್ಯಾಯಾಂಗದ ಕ್ರಿಯಾಶೀಲತೆ

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಕ್ರಾಂತಿ ಎಂದರೇನು?

ಆಂಗ್ಲರೂಪದ 'ರೆವೊಲ್ಯೂಷನ್' ಎಂಬ ಪದವನ್ನು ಲ್ಯಾಟಿನ್ ಮೂಲದ 'ರೆವೊಲ್ಯೂಷಿಯೋ' ಎಂಬ ಪದದಿಂದ ಪಡೆಯಲಾಗಿದೆ. 'ರೆವೊಲ್ಯೂಷಿಯೋ' ಎಂದರೆ ಸಂಪೂರ್ಣ ಬದಲಾವಣೆ ಎಂದರ್ಥ. ಅತ್ಯಲ್ಪ ಅವಧಿಯಲ್ಲಿ ಆಡಳಿತ ಅಥವಾ ಸಂಘಟನಾತ್ಮಕ ರೂಪರೇಷೆಗಳಲ್ಲಿ ಬರುವ ಮೂಲಭೂತ ಬದಲಾವಣೆಯನ್ನು ಇದು ಒಳಗೊಂಡಿರುತ್ತದೆ. ಮಾನವನ ಇತಿಹಾಸದಲ್ಲಿ ಕ್ರಾಂತಿಗಳು ನಡೆದಿದ್ದು, ಅವುಗಳ ಕ್ರಮ, ಅವಧಿ ಮತ್ತು ಪ್ರೇರೇಪಿಸುವ ವಿಚಾರಗಳು ವಿಸ್ತೃತವಾಗಿ ಭಿನ್ನವಾಗಿವೆ. ಅವುಗಳ ಪರಿಣಾಮ ಸಂಸ್ಕೃತಿ, ಆರ್ಥಿಕತೆ ಮತ್ತು ಸಾಮಾಜಿಕ – ರಾಜಕೀಯ ಸಂಸ್ಥೆಗಳನ್ನೊಳಗೊಂಡು ಪ್ರಮುಖ ಬದಲಾವಣೆಗಳನ್ನು ತಂದಿವೆ.

1750–1917ರ ಅವಧಿಯಲ್ಲಿ ಅಮೇರಿಕಾ ಹಾಗೂ ಯೂರೋಪ್‌ಗಳು ಹಲವು ಕ್ರಾಂತಿಗಳನ್ನು ಹಾಗೂ ರಾಷ್ಟ್ರೀಯತೆಯ ಉಗಮವನ್ನು ಕಂಡಿವೆ. ಇದರ ಪರಿಣಾಮ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ರಚನೆಯಲ್ಲಿ ಸಂಪೂರ್ಣ ಬದಲಾವಣೆ ಉಂಟಾಯಿತು. ಇವುಗಳ ಪರಿಣಾಮ ಸಾಂಸ್ಕೃತಿಕ, ಆರ್ಥಿಕ, ಮತ್ತು ಸಾಮಾಜಿಕ ಬದಲಾವಣೆಗಳನ್ನು ಒಳಗೊಂಡಿವೆ. ಮುಂದೆ ಇದು ಪ್ರಪಂಚದ ಇತರ ಭಾಗಗಳಿಗೂ ಹರಡಿತು. ನಿಜಕ್ಕೂ ಈ ಪ್ರಕ್ರಿಯೆಯು ಮಾನವ ಜನಾಂಗದ ಇತಿಹಾಸದಲ್ಲಿ ಒಂದು ಮೈಲಿಗಲ್ಲೇ ಸರಿ. ಇಂದೂ ಕೂಡ ಪ್ರಪಂಚವು ಅನೇಕ ಕ್ಷೇತ್ರಗಳಲ್ಲಿ ಕ್ರಾಂತಿಗಳನ್ನು ಕಾಣುತ್ತಿದೆ.

# ಭಾಗ – III

**III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.**

## Translate the following paragraph from English to Kannada.

**In overview of terrorism, WE try to understand how the number of terrorist acts varies around the world and how it has changed over time. To do this, we need a clear and consistent definition of what terrorism is, and how it's different from ant other form of violence. This is not straightforward.**

**Terrorism is defined in the Oxford Dictionary as "the unlawful use of violence and intimidation, especially against civilians, in the pursuit of political aims". We quickly see that this definition is unspecific and subjective. 1 The issue of subjectivity in this case means that there is no internationally recognized legal definition of terrorism. Despite considerable discussion, the formation of comprehensive convention against international terrorism by the United Nations has been impeded by the lack of consensus on a definition.**

**The key [problem is that terrorism is difficult to distinguish form other forms of political violence and violent crime, such as state-based armed conflict, non-state conflict, one-sided violence, hate crime, and homicide. The lines between these different forms of violence are often blurry. Here, we take a look at standard criteria of what constitutes terrorism, as well as how it might be distinguished from other forms of violence.**

# ಭಾಗ – IV

**II. ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.**

**ಜೀತ ಪದ್ಧತಿಯ ನಿರ್ಮೂಲನೆ (Abolition of bonded labour system)**

ಜೀತಪದ್ಧತಿಯ ಅಮಾನುಷ, ಶೋಷಣೀಯ ಮತ್ತು ಸಾಮಾಜಿಕ ನ್ಯಾಯದ ಎಲ್ಲಾ ಮಾದರಿಗಳ ಉಲ್ಲಂಘನೆಯಾಗಿದೆ. ಸಂವಿಧಾನದ ಮೂಲಭೂತ ಹಕ್ಕುಗಳ ಅಧ್ಯಾಯದಲ್ಲಿ, ಮಾನವನ ವ್ಯಾಪಾರ ಮತ್ತು ಅವನನ್ನು ಭಿಕ್ಷೆ ಬೇಡುವಂತೆ ಬಲವಂತಗೊಳಿಸುವುದನ್ನು ನಿಷೇಧಿಸಲಾಗಿದೆ ಮತ್ತು ಕಾನೂನಿನಡಿಯಲ್ಲಿ ಶಿಕ್ಷಿಸಬಹುದಾಗಿದೆ ಎಂದು ಹೇಳಲಾಗಿದೆ. ದೇಶವು ಸ್ವಾತಂತ್ರ್ಯಗೊಂಡ ತಕ್ಷಣ ಕೆಲ ರಾಜ್ಯಗಳು ಜೀತ ಪದ್ಧತಿಯನ್ನು ನಿಷೇಧಿಸಿ ಕಾನೂನುಗಳನ್ನು ಜಾರಿಗೊಳಿಸಿದವು. ಆದರೆ ಕಾನೂನಿನ ದುರ್ಬಲ ಅನುಷ್ಠಾನದಿಂದಾಗಿ ಜೀತಪದ್ಧತಿಯು ದೇಶದಲ್ಲಿ ಮುಂದುವರೆಯಿತು. 1975ರ ಅಕ್ಟೋಬರ್‌ನಲ್ಲಷ್ಟೇ ಕೇಂದ್ರ ಸರ್ಕಾರವು ಈ ಪದ್ಧತಿಯನ್ನು ನಿಷೇಧಿಸಿ ಅಧಿಸೂಚನೆಯನ್ನು ಹೊರಡಿಸಿತು. ತದನಂತರ ಜೀತ ಪದ್ಧತಿ(ನಿಷೇಧ) ಕಾಯ್ದೆ 1976 ಎಂಬ ಕಾನೂನನ್ನು ಜಾರಿಗೊಳಿಸಲಾಯಿತು. ಈ ಕಾನೂನಿನಡಿಯಲ್ಲಿ ಜೀತಪದ್ಧತಿಯನ್ನು ದೇಶದಾದ್ಯಂತ ನಿಷೇಧಿಸಲಾಯಿತು. ಈ ಕಾನೂನಿನ ಪ್ರಕಾರ, ಎಲ್ಲಾ ಜೀತ ಕಾರ್ಮಿಕ ಒಪ್ಪಂದಗಳು ಜೀತ ಸಾಲದ ವಸೂಲಾತಿಗಾಗಿ ಜಪ್ತಿ ಮಾಡುವುದು ಇತ್ಯಾದಿಗಳು ವ್ಯರ್ಥ ಮತ್ತು ರದ್ದು.

ಜೀತ ಪದ್ಧತಿ(ನಿಷೇಧ) ಕಾನೂನು, 1976 ರ ಪರಿಣಾಮವಾಗಿ 2,85,379 ಜೀತ ಕಾರ್ಮಿಕರನ್ನು ಗುರುತಿಸಲಾಯಿತಲ್ಲದೆ ಇವರಲ್ಲಿ 2,66,877 ಕಾರ್ಮಿಕರನ್ನು ಮುಕ್ತಗೊಳಿಸಿ ಕೇಂದ್ರ ಸರ್ಕಾರದ 6,881 ಲಕ್ಷ ರೂ. ಗಳ ನೆರವಿನಿಂದ ಸಂಪೂರ್ಣವಾಗಿ ಪುನರ್ವಸತಿಗೊಳಿಸಲಾಯಿತು. ಈ ಎಲ್ಲಾ ಪ್ರಯತ್ನಗಳ ಹೊರತಾಗಿಯೂ ಭಾರತದಲ್ಲಿ ಜೀತಪದ್ಧತಿಯು ಇನ್ನೂ ಅಸ್ತಿತ್ವದಲ್ಲಿದೆ. ಇದಕ್ಕೆ ಕಾರಣಗಳೆಂದರೆ : 1) ಹಲವಾರು ಕೃಷಿ ಕಾರ್ಮಿಕರಿಗೆ ಇಂತಹ ಕಾನೂನು ಅಸ್ತಿತ್ವದಲ್ಲಿರುವ ಕುರಿತು ಅರಿವಿಲ್ಲ 2) ತೀವ್ರ ಬಡತನ ಮತ್ತು ಆರ್ಥಿಕ ಮುಗ್ಗಟ್ಟು ಕೃಷಿ ಕಾರ್ಮಿಕರನ್ನು ಸ್ವಯಂ ಈ ಪದ್ಧತಿಗೆ ಈಡಾಗುವಂತೆ ಮಾಡುತ್ತಿದೆ 3) ಜೀತ ಕಾರ್ಮಿಕರನ್ನು ಗುರುತಿಸುವುದು ತ್ರಾಸದಾಯಕ ಕಾರ್ಯವಾಗಿದೆ.